ಕೊಕ್ಕರೆ ಬೆಳ್ಳೂರು ಯಶಸ್ವಿ ಯೋಜನೆ





# ಶೌಚಾ'ಲಯ' ಕ್ರಾಂತಿ?



**ಸರ್ಕಾರ ಇಷ್ಟೊಂದು ಜನಜಾಗೃತಿ ಮಾಡಿ, ಪ್ರೋತ್ಸಾಹ ಧನ ನೀಡಿದರೂ ದೇಶದಲ್ಲಿ ಅರ್ಧಕ್ಕರ್ಧ ಜನ ಇನ್ನೂ ಸ್ವಂತದ ಶೌಚಾಲಯ ಏಕೆ ಕಟ್ಟಿಸಿಕೊಂಡಿಲ್ಲ?**

■ ಸುಮಂಗಲಾ

ಗಂಗಾವತಿಯ ಢಣಾಪುರದ ಮಲ್ಲಮ್ಮ 'ಮನೆಯಲ್ಲಿ ಶೌಚಾಲಯ ಕಟ್ಟಿಸಿ' ಎಂದು ಎರಡು ದಿನ ಉಪವಾಸ ಕುಳಿತಿದ್ದು ಪತ್ರಿಕೆಗಳಲ್ಲಿ ಮಾತ್ರವಲ್ಲ, ಪ್ರಧಾನಿ ನರೇಂದ್ರ ಮೋದಿಯವರ 'ಮನ್ ಕಿ ಬಾತ್'ನಲ್ಲಿಯೂ ಪ್ರಸ್ತಾಪವಾಯಿತು. ದೇಶದಲ್ಲಿ ಅರ್ಧದಷ್ಟು ಮಂದಿಗೆ ಬಯಲೇ ಶೌಚಾಲಯವಾಗಿದೆ.

ಶೌಚಾಲಯ ಕ್ರಾಂತಿ ಎನ್ನುವುದು ಮೋದಿಯವರ 'ಸ್ವಚ್ಛ ಭಾರತ' ಅಭಿಯಾನದ ಕೂಸೇನಲ್ಲ. 1999ರಿಂದ 2012ರವರೆಗೆ ಸಂಪೂರ್ಣ ನೈರ್ಮಲ್ಯ ಆಂದೋಳನ (ಟಿಎಸ್‌ಸಿ) ಎಂಬ ಹೆಸರಿನಲ್ಲಿ, ನಂತರ 2012ರಿಂದ 14ರವರೆಗೆ ನಿರ್ಮಲ ಭಾರತ ಅಭಿಯಾನ ಎಂಬ ಹೆಸರಿನಲ್ಲಿ ಜಾರಿಯಾಗಿದ್ದ ಯೋಜನೆಯೇ ಹೊಸ ಹೆಸರಿನೊಂದಿಗೆ ಈಗ ಅವತರಿಸಿದೆ.